ಸಿ ಸಿ ನಂ. 836/2015

ಸಾಕ್ಷಿಗೆ ದಿನಾಂಕ 21-07-2023 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 2

| | | |
|---|---|---|
| ಹೆಸರು | : | ಗಂಟಿ ಫಯಾಜ್ |
| ತಂದೆಯ ಹೆಸರು | : | ಗಂಟಿ ರೆಹಮಾನ್ ಸಾಬ್ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಹೂವಿನಹಡಗಲಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿತರ ಪರಿಚಯ ಇರುವುದಿಲ್ಲ, ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ.

ಈಗ್ಗೆ ಸುಮಾರು 7-8 ವರ್ಷಗಳ ಹಿಂದೆ ನಾನು ಹೂವಿನಹಡಗಲಿಯಿಂದ ಕೊಟ್ಟೂರಿಗೆ ಮಹೀಂದ್ರಾ ಬೋಲೇರೋ ಪಿಕಪ್ ವಾಹನದಲ್ಲಿ ಕೋಳಿಯನ್ನು ಹಾಕಿಕೊಂಡು ಹೋಗುತ್ತಿರುವಾಗ ರಾತ್ರಿ 3 ಗಂಟೆ ಸುಮಾರಿಗೆ 3-4 ಜನರು ನನ್ನ ವಾಹನವನ್ನು ತಡೆದು ನಿಲ್ಲಿಸಿ ನಾವು ಪೋಲೀಸರೆಂದು ಹೇಳಿ ನನಗೆ ಹೊಡೆಬಡಿ ಮಾಡಿ ನನ್ನ ಬಳಿಯಿದ್ದ ರೂ.1 ಲಕ್ಷದ 05 ಸಾವಿರ ನಗದು ಹಣವನ್ನು ನನ್ನ ಬಳಿ ಕಿತ್ತುಕೊಂಡು ಹೊರಟುಹೋಗಿರುತ್ತಾರೆ. ಆಗ ನಾನು ಪೋಲೀಸರಿಗೆ ಫೋನ್ ಮಾಡಿ ನಡೆದ ಘಟನೆಯನ್ನು ತಿಳಿಸಿದ್ದರಿಂದ ಪೋಲೀಸರು ಬಂದು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಠಾಣೆಯಲ್ಲಿ ನಡೆದ ಘಟನೆಯ ವಿವರವನ್ನು ಕೇಳಿಕೊಂಡು ಮರುದಿನ ಮಧ್ಯಾಹ್ನದವರೆಗೆ ಠಾಣೆಯಲ್ಲಿಯೇ ಕೂರಿಸಿಕೊಂಡು ನನ್ನ ಹೇಳಿಕೆಯನ್ನು ಪಡೆದು ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇವೆ ಮತ್ತು ಆರೋಪಿತರನ್ನು ಪತ್ತೆ ಹಚ್ಚುತ್ತೇವೆಂದು ಹೇಳಿ ಕಳುಹಿಸಿರುತ್ತಾರೆ ಮತ್ತು ಆ ದಿನ ಕೆಲವು ದಾಖಲೆಗಳ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದು ಹೇಳಿಕೆ ದೂರಾಗಿದ್ದು ಅದನ್ನು ನಿಪಿ-4 ಎಂದು ಹಾಗೂ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಗುರುತಿಸಿದ್ದರಿಂದ ಸದರಿ ದಾಖಲೆಯು ಕೃತ್ಯಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ-5 ಎಂದು

ಅದರಲ್ಲಿರುವ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಛಾಯಾಚಿತ್ರಗಳನ್ನು ತೋರಿಸಲಾಗಿ ಅವುಗಳಲ್ಲಿ ನಾನು ಇದ್ದೇನೆ ಸದರಿ ಛಾಯಾಚಿತ್ರಗಳನ್ನು ಘಟನೆಯ ಮರುದಿನ ಪೊಲೀಸರು ಕೃತ್ಯಸ್ಥಳದಲ್ಲಿ ತೆಗೆಸಿದ್ದಾರೆ ಅವುಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿದೆ. ಆ ದಿನ ನನ್ನ ಬಳಿ ಬಂದು ಹಣ ಕಿತ್ತುಕೊಂಡಿದ್ದ ವ್ಯಕ್ತಿಗಳನ್ನು ಗುರುತಿಸಲು ಕತ್ತಲಾಗಿದ್ದರಿಂದ ಸಾಧ್ಯವಾಗುವುದಿಲ್ಲ. ಆ ದಿನ ನನ್ನ ಬಳಿ ಇದ್ದ ಹಣವನ್ನು ನೋಡಿ ಗುರುತಿಸಲು ಬಹಳ ದಿನಗಳಾಗಿರುವುದರಿಂದ ನೆನಪಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿದ್ದು ಪಾಟೀಸವಾಲಿಗೆ ಅನುಮತಿಯನ್ನು ಕೇಳಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ 22-04-2015 ರಂದು ಬೆಳಿಗ್ಗೆ ಮುಂಜಾನೆ 3.30 ಗಂಟೆ ಸುಮಾರಿಗೆ ನಾನು ಮತ್ತು ಮಹೀಂದ್ರಾ ಬೋಲೆರೋ ಪಿಕಪ್ ವಾಹನದ ಚಾಲಕನಾದ ಚಾಸಾ-2 ರವರೊಂದಿಗೆ ಹಡಗಲಿಯಿಂದ ಇಟಗಿ ಮಾರ್ಗವಾಗಿ ಕೊಟ್ಟೂರಿಗೆ ಹೊರಟಿದ್ದಾಗ 4 ಎ ಎಂ ಗಂಟೆ ಸುಮಾರಿಗೆ ಇಟಗಿಯ ಕೊಟ್ಟೂರು ವೃತ್ತದಲ್ಲಿ 2 ಮೋಟಾರ್ ಸೈಕಲ್ ಗಳು ಬಂದಿದ್ದು ಅವುಗಳಲ್ಲಿ 25-30 ವಯಸ್ಸಿನ ಹುಡುಗರು ಅವಾಚ್ಯ ಶಬ್ದಗಳಿಂದ ಬೈಯುತ್ತಾ ನಾವು ಪೋಲೀಸರು ಇಟಗಿಯಲ್ಲಿ ಕೈ ಮಾಡಿ ನಿಲ್ಲಿಸು ಎಂದರೂ ವಾಹನವನ್ನು ನಿಲ್ಲಿಸದೇ ಬಂದಿರುತ್ತೀಯಾ ಎಂದು ಬೈದಾಡಿದ್ದರಿಂದ, ನಾವು ವಾಹನವನ್ನು ಎಡಬದಿಯಲ್ಲಿ ನಿಲ್ಲಿಸಿದಾಗ ಸದರಿ ಬೈಕನ್ನು ನಮ್ಮ ಬಳಿ ನಿಲ್ಲಿಸಿ ನಮಗೆ ನಮ್ಮ ವಾಹನವನ್ನು ಆಫ್ ಮಾಡಲು ತಿಳಿಸಿದ್ದು, ಅದರ ಕೀಯನ್ನು ಕಿತ್ತುಕೊಂಡಿರುತ್ತಾರೆ ಮತ್ತು ವಾಹನದಿಂದ ಕೆಳಕ್ಕೆ ಇಳಿಯುತ್ತಿದ್ದಂತೆ ಸದರಿ ವ್ಯಕ್ತಿಗಳು ನಮಗೆ ಗಾಂಜಾ ಸಾಗಿಸುತ್ತಿದ್ದಾರೆಂದು ಮಾಹಿತಿ ಬಂದಿದೆ ನಾವು ವಾಹನವನ್ನು ಚೆಕ್ ಮಾಡಬೇಕೆಂದು ಹೇಳಿ ನಮ್ಮ ವಾಹನವನ್ನು ಹತ್ತಿ ಚಾಲಕನ ಸೀಟಿನ ಹಿಂಭಾಗದಲ್ಲಿಟ್ಟಿದ್ದ ಹಣದ ಬ್ಯಾಗನ್ನು ತೆಗೆದುಕೊಂಡಿರುತ್ತಾರೆ. ನಾವು ಅದನ್ನೇಕೆ ತೆಗೆದುಕೊಳ್ಳುತ್ತಿದ್ದೀರಿ ಎಂದು ಕೇಳಿದ್ದಕ್ಕೆ ಅವರು ಬಲಪ್ರಯೋಗದಿಂದ ನಮ್ಮಿಂದ ಕಿತ್ತುಕೊಂಡಿರುತ್ತಾರೆ ಮತ್ತು ಇನ್ನೊಂದು ಬೈಕನ್ನು

ನಿಲ್ಲಿಸಿ ಅದರಲ್ಲಿದ್ದ ಇನ್ನಿಬ್ಬರು ವ್ಯಕ್ತಿಗಳು ಪೊಲೀಸ್ ಠಾಣೆಗೆ ಗಾಡಿಯನ್ನು ತಿರುಗಿಸುವಂತೆ ಗದರಿಸಿರುತ್ತಾರೆ. ಆಗ ನಾನು ಮತ್ತು ಚಾಸಾ-2 ರವರು ನಮ್ಮ ಹಣ ಕೊಡಿ ಎಂದು ಕೇಳಿದ್ದಕ್ಕೆ ಅವರ ಕೈಯಲ್ಲಿದ್ದ ಚೈನು ಇಟ್ಟಿರುವ ಕಟ್ಟಿಗೆಯಿಂದ ನನ್ನ ಎರಡೂ ಕಾಲಿನ ಮಂಡಿಗೆ ಹೊಡೆದು ಗಾಯಪಡಿಸಿರುತ್ತಾರೆ ಮತ್ತು ಚಾಸಾ-2 ರವರಿಗೂ ಸಹಾ ಎರಡೂ ಕಾಲಿನ ಮಂಡಿಗೆ ಹೊಡೆದು ಒಳನೋವುಪಡಿಸಿರುತ್ತಾರೆ, ನಂತರ ಎರಡೂ ಬೈಕನ್ನು ತೆಗೆದುಕೊಂಡು ಅವರು ಹೊರಡುತ್ತಿದ್ದಾಗ ನಾವುಗಳು ವಾಹನದ ಕೀಯನ್ನು ಕೊಡಿ ಎಂದು ಕೇಳಿದ್ದಕ್ಕೆ ಸದರಿ ಕೀಯನ್ನು ಬಿಸಾಕಿದ್ದೇವೆಂದು ತೆಗೆದುಕೊಳ್ಳಿ ಎಂದು ಹೊರಟುಹೋಗಿರುತ್ತಾರೆ.

ನಮ್ಮ ಹಣದ ಬ್ಯಾಗಿನಲ್ಲಿ ರೂ.500 ಮುಖಬೆಲೆಯ 90 ನೋಟುಗಳು, ರೂ.100 ಮುಖಬೆಲೆಯ 576 ನೋಟುಗಳು ಒಟ್ಟು ರೂ.1,02,600/- ನಗದು ಹಣ ಮತ್ತು ಮೈಕ್ರೊಮ್ಯಾಕ್ಸ ಕಂಪನಿಯ ಸ್ಕ್ರೀನ್ ಟಚ್ ಮೊಬೈಲ್ ಅದಕ್ಕೆ ಅಳವಡಿಸಿದ ಏರ್ ಟೆಲ್ ಕಂಪನಿಯ ಸಿಮ್ ನಂ. 95918 67533, ಡೋಕೋಮೋ ಕಂಪನಿಯ ಸಿಮ್ ನಂ. 8147118739 ಇನ್ನೊಂದು ನೋಕಿಯಾ ಕಂಪನಿಯ ಸ್ಕ್ರೀನ್ ಟಚ್ ಮೊಬೈಲ್ ಅದಕ್ಕೆ ಅಳವಡಿಸಿದ ಐಡಿಯಾ ಕಂಪನಿಯ ಸಿಮ್ ನಂ. 7090941547, ಏರ್ ಟೆಲ್ ಕಂಪನಿಯ ಸಿಮ್ ನಂ. 7259418739 ಗಳನ್ನು ನಮ್ಮಿಂದ ಕಿತ್ತುಕೊಂಡು ಕತ್ತಲಿನಲ್ಲಿ ನಮ್ಮ ವಾಹನವನ್ನು ಅಡ್ಡಗಟ್ಟಿ ಕರಿ ಬಣ್ಣದ ಜರ್ಕಿನ್, ಅಡಿಕೆ ಬಣ್ಣದ ಟೀಶರ್ಟ ಮತ್ತು ಖಾಕಿ ಪ್ಯಾಂಟ್ ಹಾಗೂ ಕಪ್ಪು ಶೂಗಳನ್ನು ಧರಿಸಿದ್ದು ಎಣ್ಣೆಗೆಂಪು ಬಣ್ಣ 5 ಅಡಿ 6 ಇಂಚು ಎತ್ತರದವರಿದ್ದರು ಎಂದು ಈಗ ಓದಿ ಹೇಳಿದಂತೆ ನಿಪಿ-4 ರಂತೆ ಹೇಳಿಕೆ ದೂರು ಕೊಟ್ಟಿರುತ್ತೇನೆಂದರೆ ಸರಿ.

ದಿಃ 22-04-2015 ರಂದು ಬೆಳಿಗ್ಗೆ 10.45 ರಿಂದ 11.45 ಗಂಟೆಯವರೆಗೆ ನನ್ನ ಸಮಕ್ಷಮದಲ್ಲಿ ನಿಪಿ-5 ರಂತೆ ಕೃತ್ಯ ಸ್ಥಳ ಪಂಚನಾಮೆ ಮಾಡಿದ್ದಾರೆ ಮತ್ತು ಆ ಕಾಲಕ್ಕೆ ನಿಪಿ-2 ಮತ್ತು 3 ರಂತೆ ಪೋಟೋ ತೆಗೆಸಿದ್ದಾರೆ ಮತ್ತು ಆ ಕಾಲಕ್ಕೆ ನಿಪಿ-6 ರಂತೆ ನಕಾಶೆ ತಯಾರಿಸಿದ್ದಾರೆಂದರೆ ಸರಿ

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದರು, ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ